2. **ವಿಷಯ:** ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ರಿಯಾಯಿತಿಯಲ್ಲಿ ಅವಧಿ ಸಾಲ ಹೆಚ್ಚಿಸುವ ಹಾಗೂ ಮರುಪಾವತಿ ಅವಧಿಯನ್ನು ವಿಸ್ತರಿಸುವ ಬಗ್ಗೆ.

******

ಶ್ರೀ ಪಿ.ಆರ್. ಸುಧಾಕರ್‌ಲಾಲ್ (ಕೊರಟಿಗೆರೆ): ಮಾನ್ಯ ಉಪಾಧ್ಯಕ್ಷರೆ, 2014–15ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಿದಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ KSFC ವತಿಯಿಂದ ರಿಯಾಯಿತಿಯಲ್ಲಿ ಅವಧಿ ಸಾಲ ಹೆಚ್ಚಿಸುವ ಹಾಗೂ ಮರುಪಾವತಿ ಅವಧಿಯನ್ನು ವಿಸ್ತರಿಸುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಉಪಾಧ್ಯಕ್ಷರು: ಉತ್ತರ ಕೊಟ್ಟಿದ್ದಾರಲ್ಲವೇ?

ಶ್ರೀ ಪಿ.ಆರ್. ಸುಧಾಕರ್‌ಲಾಲ್: ಉತ್ತರ ಬಂದಿಲ್ಲ.

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಹಾಗೆಯೇ ಹೇಳುತ್ತೇನೆ. ಈ ಹಿಂದೆ ನಾವು KSFC ಯಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ಉದ್ಯಮವನ್ನು ಆರಂಭಿಸುವುದಕ್ಕೆ ಸುಮಾರು ಎರಡು ಕೋಟಿ ರೂ.ಗಳ ಸಾಲವನ್ನು ಕೊಡುವ ವ್ಯವಸ್ಥೆಯನ್ನು ಮಾಡಿದ್ದೆವು. ಆ ಎರಡು ಕೋಟಿ ರೂ.ಗಳ ಸಾಲವನ್ನು ಯಾರು ಪಡೆಯುತ್ತಾರೋ ಅವರಿಗೆ 4% ಬಡ್ಡಿಯನ್ನು ಹಾಕಬೇಕು. ಉಳಿದುದ್ದನ್ನು ನಮ್ಮ ಸಮಾಜ ಕಲ್ಯಾಣ ಇಲಾಖೆ ತುಂಬುವಂತಹ ವ್ಯವಸ್ಥೆ ಇತ್ತು. ಅದರ ಅವಧಿ ಐದು ವರ್ಷ ಇತ್ತು. ಐದು ವರ್ಷದಲ್ಲಿ ಸಾಲ ತೀರಿಸಬೇಕೆಂದು ಇತ್ತು. ಈಗ ಎರಡು ಕೋಟಿ ರೂ.ಗಳಿಂದ ಐದು ಕೋಟಿ ರೂ.ಗಳವರೆಗೆ ಹೆಚ್ಚಿಗೆ ಮಾಡಿದ್ದೇವೆ. ಐದು ಕೋಟಿವರೆಗೂ ಅವರು ಸಾಲ ಪಡೆಯಬಹುದು. ಅವಧಿ ಐದು ವರ್ಷ ಇರುವುದನ್ನು ಎಂಟು ವರ್ಷಕ್ಕೆ ವಿಸ್ತರಣೆ ಮಾಡಿದ್ದೇವೆ. ಜೊತೆಗೆ ಇದನ್ನು National Bank ಗೂ ಕೂಡ ವಿಸ್ತರಣೆ ಮಾಡಬೇಕು, ಸರ್ಕಾರಿ ಬ್ಯಾಂಕುಗಳು ಹಾಗೂ ಡಿ.ಸಿ.ಸಿ.

ಬ್ಯಾಂಕ್‌ಗಳು ಎನು ಇವೆಲ್ಲಾ ಇವೆಯಲ್ಲಾ, ಈ ಬ್ಯಾಂಕ್‌ಗಳಿಗೂ ಸಾಲ ಕೊಡುವುದಕ್ಕೆ ವಿಸ್ತರಣೆ ಮಾಡಬೇಕೆಂದು ಮಾನ್ಯ ಸದಸ್ಯರು ಗಮನಸೆಳೆದಿದ್ದಾರೆ. ಈ ಬಗ್ಗೆ ನಾನು ಪರಿಶೀಲನೆ ಮಾಡುತ್ತಿದ್ದೇನೆ.

ಶ್ರೀ ಪಿ.ಆರ್. ಸುಧಾಕರ್‌ಲಾಲ್: ಈ ಬಗ್ಗೆ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ.

ಉಪಾಧ್ಯಕ್ಷರು: Discussion ಬೇಡ. ಅವರು ಹೇಳಿದ್ದಾರಲ್ಲಾ.

ಶ್ರೀ ಪಿ.ಆರ್. ಸುಧಾಕರ್‌ಲಾಲ್: ಈಗ ಆದೇಶ ಆಗುವುದು ಬಾಕಿ ಇದೆ. ಆದೇಶ ಯಾವಾಗ ಮಾಡುತ್ತೀರಿ ಎನ್ನುವುದನ್ನು ಹೇಳಬೇಕಲ್ಲಾ?

ಶ್ರೀ ಹೆಚ್. ಆಂಜನೇಯ: ಆದೇಶ ಮಾಡಿದ್ದೇವೆ.

ಶ್ರೀ ಪಿ.ಆರ್. ಸುಧಾಕರ್‌ಲಾಲ್: ಆದೇಶ ಇನ್ನೂ ಆಗಿಲ್ಲ. KSFC ನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರು ಬಜೆಟ್‌ನಲ್ಲಿ ಘೋಷಣೆಯಾಗಿದೆ, ನಮಗೆ ಸಾಲ ಕೊಡಿ ಎಂದು ಕೇಳಿದರೆ, ನಮಗೆ ಇನ್ನೂ ಆದೇಶ ಆಗಿಲ್ಲವೆಂದು ಹೇಳುತ್ತಾರೆ.

ಶ್ರೀ ಹೆಚ್. ಆಂಜನೇಯ: ಆದೇಶ ಆಗಿದೆ. ಆ ರೀತಿ ಯಾರಾದರೂ ಇದ್ದರೆ ನನಗೆ ಮಾಹಿತಿ ಕೊಡಿ. ನಾನು ಅವರಿಗೆ ಮಂಜೂರು ಮಾಡಿಸಿಕೊಡುತ್ತೇನೆ.

ಶ್ರೀ ಪಿ.ಆರ್. ಸುಧಾಕರ್‌ಲಾಲ್: ಧನ್ಯವಾದಗಳು.

ಶ್ರೀ ಜೆ.ಆರ್. ಲೋಬೋ: ಸಾರ್ ನನಗೆ ಈಗ ಉತ್ತರ ಬಂದಿದೆ.

ಉಪಾಧ್ಯಕ್ಷರು: ಆನಂತರ ಕರೆಯುತ್ತೇನೆ. ಮಾನ್ಯ ಸುನೀಲ್‌ಕುಮಾರ್‌ರವರು ಮಾತನಾಡುವುದು.

3. **ವಿಷಯ:** ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಬಿಡುಗಡೆಯಾಗಿರುವ ಅನುದಾನವನ್ನು ವಿನಿಯೋಗಿಸಲು ಅನುಸರಿಸುವ ಮಾನದಂಡದ ಬಗ್ಗೆ.